ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಗಜೇಂದ್ರಗಡ

ಸಿ ಸಿ ನಂಬರ :802/2019
CW-9 PW-10

ಹೆಸರು : ಮುತ್ತಣ್ಣ ಅಲಿಯಾಸ ಅಡಿವೆಪ್ಪ ಸಂಗಳದ
ಗಂಡ ಹೆಸರು : ಗಿರಿಜಪ್ಪ
ವಯಸ್ಸು : 63 ವರ್ಷ
ಉದ್ಯೋಗ : ವ್ಯಾಪಾರ
ವಾಸಸ್ಥಳ : ರೋಣ

---

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 05-05-2026
ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ನಮ್ಮದು ಕಾಂಗ್ರೆಸ್ ಬಾರ್ ಎಂದು ಗಜೇಂದ್ರಗಡದ ಕೆ.ಕೆ.ಸರ್ಕಲ್ ಹತ್ತಿರ ಇರುತ್ತದೆ. ಪ್ರತಿದಿನ ಬೆಳಿಗ್ಗೆ 09.00 ಗಂಟೆಗೆ ತೆರೆದು ರಾತ್ರಿ 11.00 ಗಂಟೆಗೆ ಮುಚ್ಚುತ್ತೇವೆ. ಸುಮಾರು 5-6 ವರ್ಷಗಳ ಹಿಂದೆ ನಮ್ಮ ಬಾರ್‌ನಲ್ಲಿ ಮಂಜುನಾಥ ಬಿನ್ನಾಳ -ಚಾಸಾ-1 ರವರು ಮ್ಯಾನೇಜರ್ ಎಂದು ಇದ್ದರು. ನಮ್ಮ ಖಾರಕೂನ ಮಂಜುನಾಥ ಎನ್ನುವವರು ನನಗೆ ಫೋನ್ ಮಾಡಿ ಬಾರ್ ಅಂಗಡಿಯಲ್ಲಿ ಕಳ್ಳತನ ಆಗಿರುತ್ತದೆ ಎಂದು ತಿಳಿಸಿರುತ್ತಾರೆ. ನಮ್ಮ ಅಂಗಡಿಯಲ್ಲಿ ಕಳ್ಳತನ ಮಾಡಲು ಪ್ರಯತ್ನಿಸಿದ್ದು, ಆದರೆ ಯಾವುದೇ ವಸ್ತು ಕಳ್ಳತನವಾಗಿರುವುದಿಲ್ಲ. ಚಾಸಾ. 1 ರವರು ದೂರನ್ನು ನೀಡಿರುತ್ತಾರೆ. ಇಷ್ಟನ್ನು ಬಿಟ್ಟು ನನಗೆ ಬೇರೆ ಏನು ಗೊತ್ತಿಲ್ಲ.

( ಈ ಹಂತದಲ್ಲಿ ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಕಾರಣ ಅವರ ಮನವಿಯನ್ನು ಆಲಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 01.08.2018 ರಂದು ಚಾಸಾ.8 ರವರು ನನಗೆ ಫೋನ್ ಮಾಡಿ ನಿಮ್ಮ ಬಾರ್ ಸೆಟ್ರಸ್ ಓಪನ್ ಆಗಿದೆ ಎಂದು ನಾನು ರಾತ್ರಿ 2.45 ಗಂಟೆ ಸುಮಾರಿಗೆ ನನಗೆ ತಿಳಿಸಿದ್ದು, ನಾನು ಕಾಲಕಾಲೇಶ್ವರ ಫ್ರೆಂಡ್ಸ ಅಸೋಸೀಯೇಷನ್ ಬಾರ್ ಗೆ ಹೋಗಿ ನೋಡಲಾಗಿ ಅದರ ಸೆಟ್ರಸ್ ಕೊಂಡಿಗಳು ಅರ್ಧ ಮಣಿದಿದ್ದು, ಅರ್ಧ ಓಪನ್ ಆಗಿತ್ತು ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ.8 ರವರು ಒಳಗೆ ಹೋಗಿ ನೋಡಲಾಗಿ ಡ್ರಾ ಓಪನ ಆಗಿತ್ತು ಹಣ ಇಟ್ಟಿರಲಿಲ್ಲ, ಕಳ್ಳರು ಕಳ್ಳತನ ಮಾಡಲು ಪ್ರಯತ್ನ ಮಾಡಿದ್ದರು ಎಂದು

ಗೊತ್ತಾಯಿತು ಎಂದರೆ ಸರಿಯಲ್ಲ. ದಿಃ 31-07-2018 ರಂದು ರಾತ್ರಿ 11.00 ಗಂಟೆಗೆ ಅಂಗಡಿಯನ್ನು ಕ್ಲೊಸ ಮಾಡಿಕೊಂಡು ಹೋದಾಗ ಮಧ್ಯರಾತ್ರಿ ಯಾರೋ ಕಳ್ಳರು ಅಂಗಡಿಯ ಸೆಟ್ರಸನ್ನು ಓಪನ ಮಾಡಿ ಢ್ರಾದಲ್ಲಿ ಹಣ ಕಳ್ಳತನ ಮಾಡಲು ಪ್ರಯತ್ನ ಮಾಡಿದರು ಎಂದು ನನಗೆ ಗೊತ್ತಾಯಿತು ಎಂದರೆ ಸರಿ. ದಿಃ 30-01-2019 ರಂದು ಬೆಳಿಗ್ಗೆ 11.30 ಗಂಟೆ ಸುಮಾರಿಗೆ ಬೆಳಿಗ್ಗೆ ಪೊಲೀಸ ಠಾಣೆಗೆ ಆರೋಪಿತರನ್ನು ಕರೆದುಕೊಂಡು ಬಂದು ನಮ್ಮ ಸಮಕ್ಷಮ ವಿಚಾರಣೆ ಮಾಡಿದರು ಎಂದರೆ ಸರಿಯಲ್ಲ. ಅವರ ಹೆಸರು ವಿಳಾಸ ವಿಚಾರಿಸಿ ಇನ್ನಿಬ್ಬರ ಕಳ್ಳರ ಹೆಸರು ತಿಳಿಸಿದರು ಎಂದರೆ ಸರಿಯಲ್ಲ. ಆ ದಿನ ಪೊಲೀಸ ಠಾಣೆಯಲ್ಲಿ ಇದ್ದ ವ್ಯಕ್ತಿಗಳು ವೇಂಕಟೇಶ ಮತ್ತು ಚಕ್ರವರ್ತಿ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಮಧ್ಯರಾತ್ರಿ 02.30 ಗಂಟೆ ಸುಮಾರಿಗೆ ಫ್ರೆಂಡ್ಸ್ ಬಾರನ ಸೆಟ್ರಸ್ ಎತ್ತಿ ಕಳ್ಳತನ ಮಾಡಲು ಪ್ರಯತ್ನಿಸಿದಾಗ ಪೊಲೀಸರು ಬಂದಿದ್ದರಿಂದ ನಾವು 4 ಜನರು ಓ ಹೋದೇವು ಎಂದು ಹೇಳಿದರು ಎಂದರೆ ಸರಿಯಲ್ಲ. ಆ ದಿನ ಬೇರೆ ಕಡೆ ಕಳ್ಳತನ ಮಾಡಿದ್ದೇವೆ ಎಂದು ನಮ್ಮ ಸಮಕ್ಷಮ ಒಪ್ಪಿಕೊಂಡರು ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ.ಎಸ್.ಬಿ.ಹೆಚ್. 1 ನೇ ಆರೋಪಿಯ ಪರ ವಕೀಲರಿಂದಃ**

ಕಳ್ಳತನವಾದ ಬಗ್ಗೆ ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ. ಪೊಲೀಸರು ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಘಟನೆಯ ಬಗ್ಗೆ ಚಾಸಾ-1 ರವರು ಹೇಳಿದಂತೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರದಿದ್ದರೂ ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಇದೆ.

(ಹುಲುಗಪ್ಪ. ಡಿ )
ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ಗಜೇಂದ್ರಗಡ.
ಓ.ಹೇ.ಕೇ. ಸರಿ ಇದೆ.